56 ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ನಗರ
ಎಸ್.ಸಿ.ಸಂಖ್ಯೆ 1319/2024

ಸಿ.ಡಬ್ಲ್ಯೂ :8 ಪಿ.ಡಬ್ಲ್ಯೂ :1

ಪ್ರಮಾಣ ವಚನ ಭೋದಿಸಲಾಯಿತು.

ದಿ: 17.12.2025

| | |
|---|---|
| ಹೆಸರು | ಶ್ರೀಮತಿ ರತ್ನಪ್ರಭಾ |
| ತಂದೆಯ ಹೆಸರು | ಕಾಶಿನಾಥಯ್ಯ ಶಿವಣ್ಣ ಗೌಡರ್ |
| ವಯಸ್ಸು | 63 ವರ್ಷಗಳು |
| ಕೆಲಸ | ಗೃಹಿಣಿ |
| ವಾಸ | ವೆಂಕಟರಮಣ ಬಡಾವಣೆ, ಚಿತ್ರದುರ್ಗ |

<u>ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ:</u>

ನಮ್ಮ ಮನೆಯಲ್ಲಿ ನಾನು, ಚಾಸಾ 7 ನನ್ನ ಗಂಡ, ಚಾಸಾ 10 ನನ್ನ ಮಗಳು, ಚಾಸಾ 9 ಸೊಸೆ, ನನ್ನ ಅತ್ತೆ ಪ್ರಮೀಳಾ ದೇವಿ ವಾಸವಾಗಿರುತ್ತೇವೆ. ನನ್ನ ಮಗನ ಹೆಸರು ರೇಣುಕಾ ಸ್ವಾಮಿ ಕೆ.ಎಸ್. ಆತ ಬಿ.ಕಾಂ ಅರ್ಧದವರೆಗೆ ಓದಿದ್ದನು. ಆತ ಅಪೋಲೋ ಫಾರ್ಮಸಿಯಲ್ಲಿ ಕೆಲಸ ಮಾಡುತ್ತಿದ್ದನು. ನನ್ನ ಮಗ ಕೆಲಸ ಮಾಡುತ್ತಿದ್ದ ಅಪೋಲೋ ಫಾರ್ಮಸಿ ಐ.ಯು.ಬಿ.ಯು.ಪಿ ಲೇಔಟ್ ನಲ್ಲಿದೆ. ನನ್ನ ಮಗ ಬೆಳಗ್ಗೆ 9.30 ಗಂಟೆಗೆ ಕೆಲಸಕ್ಕೆ ಹೋಗಿ ಮಧ್ಯಾಹ್ನ 2.30 ಗೆ ಬರುತ್ತಿದ್ದನು. ಮತ್ತೆ ಸಂಜೆ 4.30 ಗಂಟೆಗೆ ಕೆಲಸಕ್ಕೆ ಹೋಗಿ 7.30 ಗೆ ಬರುತ್ತಿದ್ದನು. ಆತನಿಗೆ ಪ್ರತಿ ಶುಕ್ರವಾರ ರಜೆ ಇತ್ತು.

ಪ್ರತಿದಿನ ನನ್ನ ಮಗ ಕೆಲಸಕ್ಕೆ ಅಪೋಲೋ ಫಾರ್ಮಸಿ ಯವರು ಕೊಟ್ಟ ಸಮವಸ್ತ್ರ ಧರಿಸಿಕೊಂಡು ಕೊರಳಲ್ಲಿ ಚೈನು ಧರಿಸಿ, ಚಿನ್ನದ ಉಂಗುರವನ್ನು ಬೆರಳಲ್ಲಿ ಧರಿಸಿಕೊಂಡು, ಕೊರಳಲ್ಲಿ ಲಿಂಗದ ಕರಡಿಗೆ, ವಾಚು ಧರಿಸಿಕೊಂಡು ಜೊತೆಗೆ ಐಡಿ ಕಾರ್ಡ್ ಧರಿಸಿಕೊಂಡು

ಯಮಹಾ ರೈಡ್ ಗಾಡಿ ಮೇಲೆ ಕೆಲಸಕ್ಕೆ ಹೋಗುತ್ತಿದ್ದನು. ಆ ಗಾಡಿಯ ನಂ.ಕೆಎ-16-7756 ಆಗಿತ್ತು.

ದಿಃ08.06.2024 ರಂದು ನನ್ನ ಮಗ ಕೊನೆಯದಾಗಿ ಬೆಳಗ್ಗೆ 9.30 ಗಂಟೆಗೆ ಮನೆಯಿಂದ ಹೊರಟಿದ್ದನು. ಆ ದಿನ ನನ್ನ ಮಗ ನೀಲಿ ಬಣ್ಣದ ಪ್ಯಾಂಟ್ ಹಾಗೂ ತುಂಬು ತೋಳಿನ ಕ್ರೀಂ ಶರ್ಟ್ ಧರಿಸಿದ್ದನು. ಆತ ಮಧ್ಯಾಹ್ನ ಊಟಕ್ಕೆ ಬರಲಿಲ್ಲ. ನನ್ನ ಮಗ ನನ್ನ ಮೊಬೈಲ್‌ಗೆ 10.30 ಗಂಟೆಗೆ ಕರೆ ಮಾಡಿ, 4 ಜನ ಸ್ನೇಹಿತರು ಸಿಕ್ಕಿರುತ್ತಾರೆ, ಅವರ ಜೊತೆಗೆ ಕಾರಿನಲ್ಲಿ ಹೊರಗಡೆ ಊಟಕ್ಕೆ ಹೋಗಿ ಬರುತ್ತೇನೆ ಅಂತ ಹೇಳಿದನು. ವಾಪಸ್ಸು ಸಂಜೆ 6.00 ಗಂಟೆಗೆ ಬರುತ್ತೇನೆ ಅಂತ ಹೇಳಿದನು. ಆತ ಸಂಜೆ 6.00 ಗಂಟೆಗೆ ಮನೆಗೆ ವಾಪಸ್ಸು ಬರಲಿಲ್ಲ. ನಾನು 7.00 ಗಂಟೆಗೆ ಕರೆ ಮಾಡಿದಾಗ ನನ್ನ ಮಗನ ಮೊಬೈಲ್ switch off ಆಗಿತ್ತು. ನಾನು ಪದೇ ಪದೇ ಫೋನ್ ಮಾಡುತ್ತಿದ್ದರೂ ಆತನ ಮೊಬೈಲ್ switch off ಅಂತ ಬರುತ್ತಿತ್ತು. ಕೊನೆಗೆ ನನ್ನ ಗಂಡನಿಗೆ ವಿಷಯ ತಿಳಿಸಿದೆನು. ನನ್ನ ಗಂಡನೂ ಮಗನಿಗೆ ಕರೆ ಮಾಡಿದಾಗಲೂ ಆತನ ಮೊಬೈಲ್ switch off ಅಂತ ಬರುತ್ತಿತ್ತು.

ಅದೇ ದಿನ ರಾತ್ರಿ 8.00 ಗಂಟೆಗೆ ನನ್ನ ಮಗನ ಸ್ನೇಹಿತರಾದ ಸುಪ್ರೀತ್, ಹರೀಶ್ ಮತ್ತು ಸಿದ್ದು ಇವರನ್ನು ವಿಚಾರಣೆ ಮಾಡಿ ನನ್ನ ಮಗ ಸಿಕ್ಕಿದ್ದನಾ, ಆತ ಕಾಣುತ್ತಿಲ್ಲ ಅಂತ ಕೇಳಿದೆವು. ಅದಕ್ಕೆ ಅವರು ನನ್ನ ಮಗನನ್ನು ಕಂಡಿಲ್ಲ ಅಂತ ಹೇಳಿದರು. ಸುಮಾರು ಹೊತ್ತು ನಾನು ಮತ್ತು ನನ್ನ ಗಂಡ ಕಾಯ್ದೆವು. ಸುಮಾರು ರಾತ್ರಿ 11.00 ಗಂಟೆಗೆ ನನ್ನ ಗಂಡ ಆಟೋ ತೆಗೆದುಕೊಂಡು ಫಾರ್ಮಸಿ ಬಳಿ ಹೋದರು. ಆ ಫಾರ್ಮಸಿ ಬಾಗಿಲು ಮುಚ್ಚಿತ್ತು. ಅದೇ ಆಟೋದಲ್ಲಿ ನನ್ನ ಗಂಡ ಮನೆಗೆ ವಾಪಸ್ಸು ಬಂದರು.

ಭಾನುವಾರ ಬೆಳಗ್ಗೆ 9.00 ಗಂಟೆಯಿಂದ ಎಲ್ಲರನ್ನು ಪೋನ್ ಮಾಡಿ ನನ್ನ ಮಗ ರೇಣುಕಾ ಸ್ವಾಮಿ ಬಂದಿರುತ್ತಾನೆಯೇ ಅಂತ ಕೇಳಿದೆವು. ಅವರೆಲ್ಲರೂ ತಾವು ನನ್ನ ಮಗನನ್ನು ನೋಡಿಲ್ಲ ಅಂತ ಹೇಳಿದರು. ಮಧ್ಯಾಹ್ನ ನನ್ನ ಗಂಡನ ಸಂಬಂಧಿಕರಾದ ಮಲ್ಲಿಕಾರ್ಜುನಯ್ಯ ಇವರು ಅಪೋಲೋ ಪಾರ್ಮಸಿ ಬಳಿ ಬಂದಿದ್ದರು. ಅಲ್ಲಿಗೆ ನನ್ನ ಗಂಡನೂ ಹೋಗಿದ್ದನು. ನನ್ನ ಗಂಡ ಮತ್ತು ಮಲ್ಲಿಕಾರ್ಜುನಯ್ಯ ಇಬ್ಬರೂ ಅಲ್ಲಿ ನನ್ನ ಮಗನನ್ನು ಹುಡುಕಿದರು. ಆತ ಸಿಗಲಿಲ್ಲ. ಮಲ್ಲಿಕಾರ್ಜುನಯ್ಯ ಇವರು ಭಾನುವಾರ ಸಂಜೆವರೆಗೆ ನೋಡೋಣಾ ಅಂತ ಹೇಳಿ ನನ್ನ ಗಂಡ ನಮ್ಮ ಮನೆಗೆ ಬಂದರು, ಮಲ್ಲಿಕಾರ್ಜುನಯ್ಯ ಅವರು ತಮ್ಮ ಮನೆಗೆ ಹೋದರು. ಸಂಜೆವರೆಗೆ ನಾವು ಕಾದರೂ ಮಗ ವಾಪಸ್ಸು ಬರಲಿಲ್ಲ.

ಸೋಮವಾರ ಬೆಳಗ್ಗೆ 10.00 ಗಂಟೆಗೆ ನನ್ನ ಗಂಡ ಮಲ್ಲಿಕಾರ್ಜುನಯ್ಯ ಇವರಿಗೆ ಪೋನ್ ಮಾಡಿ ಪಾರ್ಮಸಿ ಬಳಿ ಬರುವಂತೆ ಹೇಳಿದರು. ಅದರಂತೆ ನನ್ನ ಗಂಡ ಮತ್ತು ಮಲ್ಲಿಕಾರ್ಜುನಯ್ಯ ಇವರು ಪಾರ್ಮಸಿ ಬಳಿ ಹೋದರು. ಅಲ್ಲಿ ನನ್ನ ಮಗ ಇರಲಿಲ್ಲ. ಬಾಲಾಜಿ ಬಾರ್ ಪಕ್ಕದಲ್ಲಿ ನಮ್ಮ ಯಮಹ ಗಾಡಿ ನಿಂತಿತ್ತು. ಅದನ್ನು ಕಂಡ ನನ್ನ ಗಂಡ ಗಾಡಿ ಸ್ಥಳದಲ್ಲಿದೆ, ಅದರ ಕೀ ತೆಗೆದುಕೊಂಡು ಬರುವಂತೆ ನನ್ನ ಮಗಳಿಗೆ ಪೋನ್ ಮಾಡಿ ಹೇಳಿದರು. ಅದರಂತೆ ನನ್ನ ಮಗಳು ಕೀ ತೆಗೆದುಕೊಂಡು ಹೋದರು. ಅಲ್ಲಿಂದ ಗಾಡಿಯನ್ನು ಮನೆಗೆ ತೆಗೆದುಕೊಂಡು ಬಂದರು. ನನ್ನ ಮಗ ಕೆಲಸ ಮಾಡುವ ಸ್ಥಳದಲ್ಲಿ ಇದ್ದ ಜ್ಞಾನೇಶ್ ಎನ್ನುವ ಹುಡುಗನಿಗೆ ನನ್ನ ಗಂಡ ತಮ್ಮ ಮೊಬೈಲ್ ನಂಬರ್ ಕೊಟ್ಟು, ರೇಣುಕಾ ಸ್ವಾಮಿ ಬಂದಲ್ಲಿ ತಮ್ಮ ಮೊಬೈಲ್ ನಂಬರ್‌ಗೆ ಕರೆ ಮಾಡುವಂತೆ ತಿಳಿಸಿದ್ದರು. ನನ್ನ ಗಂಡನ ಮೊಬೈಲ್ ನಂ.9901123566.

ದಿ:10.06.2024 ರಂದು ಸೋಮವಾರ ಸಂಜೆ 5.00 ಗಂಟೆಗೆ ನನ್ನ ಗಂಡನ ಮೊಬೈಲ್‌ಗೆ ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಯಿಂದ ಪೋನ್ ಬಂತು. ಹೀಗೆ ಪೋನ್ ಮಾಡಿದಾಗ ರೇಣುಕಾ ಸ್ವಾಮಿ ನಿಮಗೆ ಏನು ಆಗಬೇಕು ಎಂದು ಕೇಳಿದರು. ನನ್ನ ಗಂಡನಿಗೆ ಶ್ರವಣ ದೋಷ ಇರುವುದರಿಂದ ಅವರಿಗೆ ಕರೆ ಸರಿಯಾಗಿ ಕೇಳಲಿಲ್ಲ. ಆಗ ನನ್ನ ಗಂಡ ತನ್ನ ಮೊಬೈಲನ್ನು ಮಲ್ಲಿಕಾರ್ಜುನಯ್ಯರವರಿಗೆ ಕೊಟ್ಟರು. ಪೊಲೀಸರು ಮಲ್ಲಿಕಾರ್ಜುನಯ್ಯ ಇವರಿಗೆ ಏನು ಹೇಳಿದರು ಎನ್ನುವುದು ಗೊತ್ತಿಲ್ಲ. ಮಲ್ಲಿಕಾರ್ಜುನಯ್ಯ ಇವರು ನಮಗೆ ನಾಳೆ ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಗೆ ಹೋಗಬೇಕು ಅಂತ ಹೇಳಿದರು.

ದಿ:11.06.2024 ರಂದು ಮಂಗಳವಾರ ಬೆಳಗ್ಗೆ 5.00 ಗಂಟೆಗೆ ನಾನು, ನನ್ನ ಗಂಡ ಹಾಗೂ ಮಲ್ಲಿಕಾರ್ಜುನಯ್ಯ ಸೇರಿ ಕಾರಿನಲ್ಲಿ ಚಿತ್ರದುರ್ಗದಿಂದ ಬೆಂಗಳೂರಿಗೆ ಹೊರಟೆವು. ಬೆಳಗ್ಗೆ 9.00 ಗಂಟೆಗೆ ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಗೆ ಬಂದೆವು. ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಗೆ ನನ್ನ ಗಂಡನ ಅಣ್ಣನ ಮಗನಾದ ಸಿದ್ದಲಿಂಗ ಸ್ವಾಮಿ ಹಾಗೂ ನನ್ನ ಗಂಡನ ತಂಗಿಯ ಮಗನಾದ ಸಿದ್ದಲಿಂಗ ಸ್ವಾಮಿ ಇಬ್ಬರೂ ಠಾಣೆಗೆ ಬಂದಿದ್ದರು. ನಾನು ಮತ್ತು ನನ್ನ ಗಂಡ ಕಾರಿನಲ್ಲಿ ಕುಳಿತ್ತಿದ್ದೆವು. ಈ ಮೇಲೆ ಹೇಳಿದ ಇಬ್ಬರು ಸಿದ್ದಲಿಂಗ ಸ್ವಾಮಿಗಳು ಹಾಗೂ ಮಲ್ಲಿಕಾರ್ಜುನಯ್ಯ ಇವರು ಪೊಲೀಸ್ ಠಾಣೆಯೊಳಗೆ ಹೋದರು.

ನನ್ನ ಗಂಡನ ಅಣ್ಣನ ಮಗನಾದ ಸಿದ್ದಲಿಂಗ ಸ್ವಾಮಿ ಇವರು ಕಾರ್ ಬಳಿ ಬಂದು, ರೇಣುಕಾ ಸ್ವಾಮಿಯ ಕೊಲೆಯಾಗಿದೆ ಧೈರ್ಯ ತೆಗೆದುಕೊಳ್ಳಿ ಅಂತ ನನಗೆ ಮತ್ತು ನನ್ನ ಗಂಡನಿಗೆ ಹೇಳಿದರು. ನಂತರ ನಮ್ಮನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ನಾವು ಠಾಣೆಯೊಳಗೆ ಹೋದಾಗ ಪೊಲೀಸರು ಚಿತ್ರನಟ ದರ್ಶನ್ ಇವರ ಗ್ಯಾಂಗ್ ನಿಂದ ನನ್ನ ಮಗನ ಕೊಲೆಯಾಗಿದೆ ಅಂತ ತಿಳಿಸಿದರು.

ನಂತರ ನಮ್ಮನ್ನು ಶವ ಇಟ್ಟ ವಿಕ್ಟೋರಿಯಾ ಆಸ್ಪತ್ರೆಗೆ ಹೋಗೋಣ ಅಂತ ಹೇಳಿದರು. ಅದರಂತೆ ಆಸ್ಪತ್ರೆಗೆ ಹೋದಾಗ ಬೆಳಗ್ಗೆ 11.30 ಗಂಟೆಯಾಗಿತ್ತು. ಶವಗಾರಕ್ಕೆ ಕರೆದುಕೊಂಡು ಹೋಗಿ ನನ್ನ ಮಗನ ಶವವನ್ನು ತೋರಿಸಿದರು. ಶವವನ್ನು ನೋಡಿದಾಗ ಆತನ ತಲೆಗೆ ತೂತುಗಳಾಗಿದ್ದವು, ಕಣ್ಣುಗಳು ಮತ್ತು ಕೆನ್ನೆಗಳು ಊದಿದ್ದವು. ಬಲ ಕಿವಿ ಹರಿದಿತ್ತು. ತುಟಿಗಳು ಹರಿದಿದ್ದವು. ಕೈಗಳ ಮೇಲೆ ಸುಟ್ಟ ಕಲೆಗಳು ಇದ್ದವು. ಎದೆಯ ಮೇಲೆ ಹೊಡೆದ ಬಾರ್ ರೀತಿಯ ಗುರುತುಗಳು ಇದ್ದವು. ಕಾಲುಗಳ ಮೇಲೆ ಹೊಡೆದ ಗುರುತುಗಳು ಇದ್ದವು. ಎರಡು ಕೈಗಳು ಸುಟ್ಟಿದ್ದವು. ಕಾಲುಗಳು ಊದಿದ್ದವು. ಬೆನ್ನಿನ ಮೇಲೆ ಬಾರ್ ಗುರುತುಗಳು ಇದ್ದವು. ನಂತರ ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸುತ್ತೇವೆ ಅಂತ ಹೇಳಿದಾಗ ರೂಮಿನಿಂದ ನಾವು ಹೊರಗೆ ಬಂದೆವು. ನನ್ನ ಮಗನ ಒಂದು ವೃಷಣ ಇರಲಿಲ್ಲ. ನನ್ನ ಮಗನ ಶವವನ್ನು ಗುರುತಿಸಿದೆನು. ನನ್ನ ಮಗನ ದೇಹದ ಮೇಲೆ ತುಂಬು ತೋಳಿನ ಶರ್ಟ್ ಮತ್ತು ಅಂಡರ್ ವೇರ್ ಇತ್ತು. ನನ್ನ ಮಗನ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. (ನ್ಯಾಯಾಲಯದ ಮುಂದೆ ಬಿಳಿ ಬಟ್ಟೆಯಲ್ಲಿ ವಸ್ತುಗಳು ಇದ್ದು, ಅವುಗಳಿಗೆ ಸೀಲ್ ಮಾಡಲಾಗಿತ್ತು. ಆ ಸೀಲ್‌ಗಳನ್ನು ಪರಿಶೀಲಿಸುವಂತೆ ಆರೋಪಿ ಪರ ವಕೀಲರಿಗೆ ತಿಳಿಸಲಾಯಿತು. ಆ ಸೀಲ್‌ಗಳನ್ನು ಪರಿಶೀಲಿಸಲಾಗಿ ಅವು ಸುಸ್ಥಿತಿಯಲ್ಲಿವೆ ಅಂತ ದೃಡೀಕರಿಸಿದರು).

ಬಿಳಿ ಬಟ್ಟೆಯಲ್ಲಿದ್ದ ವಸ್ತುಗಳನ್ನು ತೆಗೆದು ಸಾಕ್ಷಿಗೆ ತೋರಿಸಿದಾಗ ಸಾಕ್ಷಿದಾರರು ಕಪ್ಪು ಬಣ್ಣದ ಲೈಟ್ ಗ್ರೇ, ಡಾರ್ಕ್ ಗ್ರೇ ಬಣ್ಣದ ತುಂಬು ತೋಳಿನ ಶರ್ಟನ್ನು ಗುರುತಿಸಿದ್ದು ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು. ಸಾಕ್ಷಿದಾರರು ನೀಲಿ ಬಣ್ಣದ ಅಂಡರ್ ವೇರನ್ನು ಗುರುತಿಸಿದ್ದು ಅದನ್ನು ಮು.ಮಾ 2 ಎಂದು ಗುರುತಿಸಲಾಯಿತು. ಮಗನ ಸೊಂಟದಲ್ಲಿ ಕೆಂಪು

ಬಣ್ಣದ ಉಡುದಾರ ಇತ್ತು. ನ್ಯಾಯಾಲಯದ ಮುಂದಿರುವ ಉಡುದಾರವನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮು.ಮಾ 3 ಎಂದು ಗುರುತಿಸಲಾಯಿತು.

ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ನಮಗೆ ಕೊಟ್ಟರು ಅದನ್ನು ಆ್ಯಂಬುಲೆನ್ಸ್ ನಲ್ಲಿ ತೆಗೆದುಕೊಂಡು ನಮ್ಮ ಊರಾದ ಚಿತ್ರದುರ್ಗಕ್ಕೆ ಹೋದೆವು. ಶವವನ್ನು ಪಡೆದಾಗ ಸ್ವೀಕೃತಿ ಪತ್ರಕ್ಕೆ ನಾನು ರುಜು ಮಾಡಿರುತ್ತೇನೆ. ಆ ಸ್ವೀಕೃತಿಯನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನನ್ನ ಮಗನ ಶವದ ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. 4 ಪೋಟೋಗಳನ್ನು ಸಾಕ್ಷಿದಾರರು ಗುರುತಿಸಿದ್ದು ಅವುಗಳನ್ನು ನಿಪಿ.2 ರಿಂದ 5 ಎಂದು ಗುರುತಿಸಲಾಯಿತು. ಶವವನ್ನು ಸ್ವೀಕರಿಸುವ ಕಾಲಕ್ಕೆ ತೆಗೆದ 4 ಪೋಟೋಗಳನ್ನು ಕ್ರಮವಾಗಿ ನಿಪಿ.6 ರಿಂದ ನಿಪಿ.9 ಎಂದು ಗುರುತಿಸಲಾಯಿತು.

ಅಂತ್ಯ ಸಂಸ್ಕಾರ ಮಾಡಿದ ನಂತರ ದಿಃ14.06.2024 ರಂದು ನಾನು, ನನ್ನ ಗಂಡ ಮತ್ತು ನನ್ನ ಗಂಡನ ಸ್ನೇಹಿತರಾದ ಶಡಕ್ಷರಯ್ಯ ಇವರು ಬೆಂಗಳೂರಿಗೆ ಬಂದಿದ್ದೆವು. ಬೆಂಗಳೂರಿಗೆ ಬಂದು ಪೊಲೀಸ್ ಕಮೀಷನರ್ ರವರನ್ನು ಬೇಟಿಯಾದೆವು. ಅಲ್ಲಿಂದ ಡಿಸಿಪಿಯವರ ಬಳಿ ಹೋದೆವು. ಅಲ್ಲಿ ನಮ್ಮ ಮಗನಿಗೆ ನ್ಯಾಯ ಕೊಡಿಸಬೇಕು ಅಂತ ಕೇಳಿದೆವು. ಅಲ್ಲಿಂದ ಮನೆಗೆ ವಾಪಸ್ಸು ಹೋದೆವು. ದಿಃ16.06.2024 ರಂದು ರಾತ್ರಿ 9.45 ಗಂಟೆ ಸುಮಾರಿಗೆ 3 ಜನ ಪೊಲೀಸರು ನಮ್ಮ ಮನೆಗೆ ಬಂದರು. ಅವರು ನನ್ನ ಮಗನಿಗೆ ಸೇರಿದ ಚಿನ್ನದ ಚೈನ್, ಚಿನ್ನದ ಉಂಗುರವನ್ನು 4ನೇ ಆರೋಪಿ ರಾಘವೇಂದ್ರರವರ ಮನೆಯಿಂದ ಅಮಾನತ್ತುಪಡಿಸಿಕೊಂಡು ಬಂದಿದ್ದು, ಅವುಗಳನ್ನು ಗುರುತಿಸುವಂತೆ ಕೇಳಿ ತೋರಿಸಿದರು.

ಉಂಗುರವನ್ನು ನನ್ನ ಮಗನ ನಿಶ್ಚಿತಾರ್ಥ ಸಮಯದಲ್ಲಿ ವಧುವಿನ ಕಡೆಯವರು ಕೊಟ್ಟಿದ್ದರು. ಅದರ ಮೇಲೆ ಆರ್.ಎಸ್ ಎಂಬ ಇಂಗ್ಲೀಷ್ ಅಕ್ಷರಗಳು ಇದ್ದವು. ಅದನ್ನು ತೋರಿಸಿದರು. ಆ ಉಂಗುರವನ್ನು ನಾನು ನೋಡಿದಾಗ ಅದು ನನ್ನ ಮಗನದ್ದು ಅಂತ ಗುರುತಿಸಿದೆನು. ಅದರ ಮೇಲೆ ಆರ್.ಎಸ್ ಎಂಬ ಇಂಗ್ಲೀಷ್ ಅಕ್ಷರಗಳು ಇದ್ದವು. ಆರ್.ಎಸ್ ಎಂದರೆ ರೇಣುಕಾ ಸ್ವಾಮಿ - ಸಹನ ಎಂಬ ವಿಸ್ತ್ರುತ ರೂಪ. ರಸೀದಿಯ ಬಗ್ಗೆ ಕೇಳಿದರು. ರಸೀದಿ ಇದೆ ಅಂತ ಹೇಳಿ ಅದನ್ನು ಕೊಟ್ಟೆವು. ಚೈನನ್ನು ಸಹ ನೋಡಿ ಗುರುತಿಸಿದೆವು, ಉಂಗುರ, ಚೈನ್ ಮತ್ತು ರಸೀದಿ ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಚೈನನ್ನು ಗುರುತಿಸಿದ್ದು ಮು.ಮಾ 4 ಎಂದು, ಚಿನ್ನದ ಉಂಗುರವನ್ನು ಮು.ಮಾ 5 ಎಂದು (ಒಂದು ಸೀಲ್ ಮಾಡಲಾದ ಒಂದು ಕವರನ್ನು ಪರಿಶೀಲಿಸುವಂತೆ ಆರೋಪಿ ಪರ ವಕೀಲರಿಗೆ ತಿಳಿಸಲಾಯಿತು. ಆ ಸೀಲ್‌ಗಳನ್ನು ಪರಿಶೀಲಿಸಲಾಗಿ ಅವು ಸುಸ್ಥಿತಿಯಲ್ಲಿವೆ ಅಂತ ದೃಡೀಕರಿಸಿದರು). ಆ ಕವರನ್ನು ತೆಗೆದು ಅದರಲ್ಲಿರುವ ಎರಡು ಬಿಲ್‌ಗಳನ್ನು ಸಾಕ್ಷಿದಾರರು ಗುರುತಿಸಿದ್ದು ಅವುಗಳನ್ನು ಮು.ಮಾ 6 ಮತ್ತು 7 ಎಂದು ಗುರುತಿಸಲಾಯಿತು. ಮು.ಮಾ 4 ಮತ್ತು 5 ನ್ನು ಗುರುತಿಸಿ, ಮು.ಮಾ 6 ಮತ್ತು 7 ನ್ನು ಪೊಲೀಸರಿಗೆ ಕೊಟ್ಟಾಗ ಅವರು ಪ್ರಿಂಟ್ ತೆಗೆದು ಫೋಟೋ ತೆಗೆದರು. ನನ್ನ, ನನ್ನ ಗಂಡನ ಹಾಗೂ ನನ್ನ ಸೊಸೆಯ ರುಜು ಪಡೆದುಕೊಂಡಿರುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ 4 ಪುಟಗಳ ಮಹಜರನ್ನು ತೋರಿಸಿದ್ದು ಅವುಗಳ ಪ್ರತಿ ಪುಟದ ಮೇಲಿರುವ ತನ್ನ ರುಜುಗಳನ್ನು ಗುರುತಿಸಿರುತ್ತಾರೆ. ಅವುಗಳನ್ನು ನಿಪಿ.10 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ನಿಪಿ.10(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಎರಡು ಫೋಟೋ ತೆಗೆದಿದ್ದರು. ಅವುಗಳನ್ನು ನಿಪಿ.11 ಮತ್ತು ನಿಪಿ.12 ಎಂದು ಗುರುತಿಸಲಾಯಿತು. ಇನ್ನೊಂದು ಫೋಟೋವನ್ನು ನಿಪಿ.13 ಎಂದು ಗುರುತಿಸಲಾಯಿತು.

ನನ್ನ ಮಗ ಮನೆಯಿಂದ ಹೊರಡುವಾಗ ಧರಿಸಿದ್ದ ಪ್ಯಾಂಟ್ ಮತ್ತು ಶರ್ಟನ್ನು ನೋಡಿದರೆ ಗುರುತಿಸುತ್ತೇನೆ. (ಸೀಲ್ ಮಾಡಲಾದ ಎರಡು ಬಿಳಿ ಬಟ್ಟೆಯ ಕವರನ್ನು ಪರಿಶೀಲಿಸುವಂತೆ ಆರೋಪಿ ಪರ ವಕೀಲರಿಗೆ ತಿಳಿಸಲಾಯಿತು. ಸದರಿ ಕವರನ್ನು ಪರಿಶೀಲಿಸಲಾಗಿ ಅವು ಸುಸ್ಥಿತಿಯಲ್ಲಿವೆ ಅಂತ ದೃಡೀಕರಿಸಿದರು). ಬಿಳಿ ಬಟ್ಟೆಯಲ್ಲಿಟ್ಟಿದ್ದ ಫಿಎಫ್ ನಂ.120/24 ರಲ್ಲಿಯ ಐಟಂ ನಂ.2 ನ್ನು ಎಲ್ಲರ ಸಮ್ಮುಖದಲ್ಲಿ ತೆಗೆದು ಅದರಲ್ಲಿದ್ದ ವಸ್ತುವನ್ನು ಸಾಕ್ಷಿಗೆ ತೋರಿಸಿದಾಗ ಸಾಕ್ಷಿದಾರರು ಅದು ತನ್ನ ಮಗ ರೇಣುಕಾ ಸ್ವಾಮಿ ಧರಿಸಿದ್ದ ಶರ್ಟ್ ಅಂತ ಗುರುತಿಸಿರುತ್ತಾರೆ. ಸದರಿ ಶರ್ಟನ್ನು ಮು.ಮಾ 8 ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಆರೋಪಿತರ ಪರ ವಕೀಲರು ಸಾಕ್ಷಿಯ ಗಂಡನಾದ ಚಾಸಾ 7 ರವರ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ಹೇಳಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇ.

(ಐ.ಪಿ.ನಾಯಿಕ)
56 ನೇ ಅಪರ ಸಿಟಿ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು.

ದಿಃ*17.12.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ.ಎಸ್.ಬಿ ವಕೀಲರಿಂದಃ**

ನನ್ನ ಮಗನ ಮೇಲೆ ಚಿತ್ರದುರ್ಗ ನ್ಯಾಯಾಲಯದಲ್ಲಿ ಕೇಸು ಇದ್ದು, ವಿಚಾರಣೆಯ ದಿನದಂದು ನನಗೆ ಹೇಳಿ ಹೋಗುತ್ತಿದ್ದ ಎಂದರೆ ಸರಿಯಲ್ಲ. ನನ್ನ ಮಗ ಭಜರಂಗದಳದಲ್ಲಿ ಗುರುತಿಸಿಕೊಂಡು ಆ ದಳದ ಹುಡುಗರ ಜೊತೆಗೆ ಓಡಾಡಿಕೊಂಡಿದ್ದ ಎಂದರೆ ನನಗೆ ಗೊತ್ತಿಲ್ಲ. ಹೊಡೆದಾಟದ ಕೇಸಿನಲ್ಲಿ ನನ್ನ ಮಗನನ್ನು ಪೊಲೀಸರು ಬಂಧಿಸಿದ್ದರು ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯ ಮುಂದೆ ಈಗ ನನಗೆ ಓದಿ ಹೇಳಿರುವಂತೆ "ನಂತರ ಆತ ಮಧ್ಯಾಹ್ನದ ಸಮಯದಲ್ಲಿ ------------------- ಊಟಕ್ಕೆ ಹೋಗುವುದಾಗಿ ತಿಳಿಸಿದನು" ಅಂತ ಹೇಳಿಕೆ ಕೊಟ್ಟಿಲ್ಲ. ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಸದರಿ ಹೇಳಿಕೆಯ ಭಾಗವನ್ನು ನಿಡಿ.*1* ಎಂದು ಗುರುತಿಸಲಾಯಿತು.

*4* ಪುಟಗಳ ಹೇಳಿಕೆಯನ್ನು ನಾನು ಯಾವ ಊರಿನಲ್ಲಿ ಕೊಟ್ಟಿರುತ್ತೇನೆ ಎನ್ನುವುದು ಗೊತ್ತಿಲ್ಲ. ದಿಃ*11.06.2024* ರಂದು ಪೊಲೀಸರು ನನ್ನನ್ನು ವಿಚಾರಿಸಿಲ್ಲ. ದಿಃ*11.06.2024* ರಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ದಿಃ*14.06.2024* ರಂದು ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಸಾಮಾನ್ಯವಾಗಿ ಮಧ್ಯಾಹ್ನವನ್ನು ಮಧ್ಯಾಹ್ನ *2.00* ರಿಂದ *4.00* ಗಂಟೆ ಸಮಯವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ನನಗೆ, ನನ್ನ ಗಂಡನಿಗೆ ಮತ್ತು ನನ್ನ ಸೊಸೆಗೆ ಬೇರೆ ಬೇರೆ ಮೂರು ಮೊಬೈಲ್‌ಗಳು ಇವೆ. ನನ್ನ ಮಗನಿಂದ ಮೂರು ಜನರ ಮೊಬೈಲ್‌ಗಳಿಗೆ ಕರೆ ಬಂದಿವೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ನನಗೆ ಮಾತ್ರ ಕರೆ ಬಂದಿತ್ತು ಎಂದು ನುಡಿದಿರುತ್ತಾರೆ. ನನ್ನ ಮೊಬೈಲ್ ನನ್ನ ಬಳಿ ಇದೆ.

ದಿಃ*08.06.2024* ರಂದು ಸಂಜೆ *7.00* ಗಂಟೆಗೆ ನನ್ನ ಮಗನಿಂದ ನನ್ನ ಮೊಬೈಲ್‌ಗೆ ಕರೆ ಬಂತು ಎಂದರೆ ಸರಿಯಲ್ಲ. ನನ್ನ ಮಗನಿಂದ ನನಗೆ ಆ ದಿನ ಕರೆ ಬಂದಿತ್ತು ಅಂತ ಪೊಲೀಸರಿಗೆ ತೋರಿಸಿ ಹೇಳಿಲ್ಲ. ಪೊಲೀಸರು ನನ್ನ ಮೊಬೈಲನ್ನು ಪಡೆದುಕೊಂಡು ನನ್ನ ಮಗನಿಂದ ಕರೆ ಬಂದಿರುವುದನ್ನು ಪರಿಶೀಲನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ*08.06.2024* ರಂದು ನನ್ನ ಮಗ ಸಂಜೆ *5.00* ಗಂಟೆ ಮತ್ತು *7.00* ಗಂಟೆಗೆ ಪೋನ್ ಮಾಡಿ ತಾನು ಚಿತ್ರದುರ್ಗದಲ್ಲಿ ಇದ್ದೇನೆ, ಬರುತ್ತೇನೆ ಅಂತ ನನಗೆ ಹೇಳಿದ್ದ ಎಂದರೆ ಸರಿಯಲ್ಲ.

ದಿಃ*08.06.2024* ರಂದು ನನ್ನ ಮಗ ಬೆಳಗ್ಗೆ *10.30* ರಿಂದ ಮಧ್ಯಾಹ್ನ *12.30* ರವರೆಗೆ ಅಪೋಲೋ ಪಾರ್ಮಸಿಯಲ್ಲಿ ಕೆಲಸ ಮಾಡಿದ್ದ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗನಿಂದ ನನಗೆ ಕರೆ ಬಂದಾಗ ಆತನನ್ನು ಎಲ್ಲಿ ಇದ್ದೀಯಾ ಅಂತ ನಾನು ಕೇಳಿಲ್ಲ. ನನ್ನ ಮಗ ನನಗೆ ಕರೆ ಮಾಡಿದಾಗ ಚಿತ್ರದುರ್ಗದಲ್ಲಿಯೇ ಇದ್ದ ಎಂದರೆ ಸರಿಯಲ್ಲ. ನನ್ನ ಮಗ ನನಗೆ ಕರೆ ಮಾಡಿ ಊಟಕ್ಕೆ ಹೊರಗಡೆ ಹೋಗುತ್ತಿದ್ದೇನೆ ಅಂತ ಹೇಳಿದ್ದನು. ಎಲ್ಲಿ ಅಂತ ಹೇಳಿರಲಿಲ್ಲ. ನನ್ನ ಮಗ ನನಗೆ ಬೆಳಗ್ಗೆ *10.30* ಗಂಟೆಗೆ ಕರೆ ಮಾಡಿದ್ದ ಅಂತ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಬೆಳಗ್ಗೆ *10.30* ಗಂಟೆಗೆ ಪೋನ್ ಮಾಡಿದ್ದ ಅಂತ ತನಿಖಾಧಿಕಾರಿಯ ಮುಂದೆ ಹೇಳಿಲ್ಲ, ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿದಾರರು ಈ ವಿಷಯವನ್ನು ತನಿಖಾಧಿಕಾರಿಯ ಮುಂದೆ ಹೇಳಿಲ್ಲ, ಸಾಕ್ಷಿದಾರರು ಮುಂದುವರಿದು ಮೊದಲನೇ ದಿನ ಹೇಳಿಲ್ಲ ಎಂದು ನುಡಿದಿರುತ್ತಾರೆ.

ನನ್ನ ಮಗನ ವಿಷಯವಾಗಿ ಸಂಜೆ *6.00* ರಿಂದ *7.00* ಗಂಟೆ ಸಮಯದಲ್ಲಿ ನನ್ನ ಗಂಡ ಮತ್ತು ಸೊಸೆಯ ಬಳಿ ಮಾತನಾಡಿಲ್ಲ. ದಿಃ*08.06.2024* ರಂದು ರಾತ್ರಿ *12.00* ಗಂಟೆಯವರೆಗೆ

ನನ್ನ ಗಂಡ ಮತ್ತು ನನ್ನ ಸೊಸೆ ಮನೆಯಲ್ಲಿದ್ದು ಅವರಿಗೆ ನನ್ನ ಮಗನ ಮೊಬೈಲ್ *switch off* ಆಗಿತ್ತು ಎಂದು ಹೇಳಿರುತ್ತೇನೆ. ನನ್ನ ಮಗ ನನ್ನ ಗಂಡನ ಜೊತೆಗೆ ಸಂಜೀ *7.00* ಗಂಟೆಗೆ ಮಾತನಾಡಿದ್ದ ಎಂದರೆ ಸರಿಯಲ್ಲ. ಆ ದಿನ ಸಂಜೆ *7.00* ಗಂಟೆಯವರೆಗೆ ನನ್ನ ಮಗ ಅಪೋಲೋ ಪಾರ್ಮಸಿಗೆ ಕೆಲಸಕ್ಕೆ ಬಂದಿದ್ದ ಅಂತ ಕೇಳುವ ಅವಶ್ಯಕತೆ ಇತ್ತು. ಅಪೋಲೋ ಪಾರ್ಮಸಿಯವರಿಗೆ ನಾನು ಪೋನ್ ಮಾಡಿ ನನ್ನ ಮಗ ಕೆಲಸಕ್ಕೆ ಬಂದಿದ್ದನಾ ಅಂತ ವಿಚಾರಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಸಂಜೆ *5.00* ಗಂಟೆಯವರೆಗೆ ಚಿತ್ರದುರ್ಗದಲ್ಲಿ ಇದ್ದಿರುವುದರಿಂದ ನಾನು ಅಪೋಲೋ ಪಾರ್ಮಸಿಯವರನ್ನು ಕೇಳಲಿಲ್ಲ ಎಂದರೆ ಸಾಕ್ಷಿದಾರರು ನನ್ನ ಮಗ ಚಿತ್ರದುರ್ಗದಲ್ಲಿ ಇರಲಿಲ್ಲ ಎಂದು ನುಡಿದಿರುತ್ತಾರೆ. ಸಂಜೆ *5.00* ಗಂಟೆಗೆ ನನ್ನ ಮಗ ಚಿತ್ರದುರ್ಗದಲ್ಲಿ ಇರಲಿಲ್ಲ ಎಂಬ ವಿಚಾರವನ್ನು ಯಾರು ಹೇಳಿದರು ಎಂಬ ಪ್ರಶ್ನೆಗೆ ಸಾಕ್ಷಿದಾರರು *7.00* ಗಂಟೆಗೆ ನಾನು ಪೋನ್ ಮಾಡಿದಾಗ ನನ್ನ ಮಗನ ಮೊಬೈಲ್ *switch off* ಆಗಿದ್ದರಿಂದ ಆತ ಚಿತ್ರದುರ್ಗದಲ್ಲಿ ಇರಲಿಲ್ಲ ಅಂತ ಹೇಳುತ್ತಿದ್ದೇನೆ.

ಸಂಜೆ *7.00* ಗಂಟೆಗೆ ನನ್ನ ಮಗ ಮನೆಗೆ ಇನ್ನೂ ಬಂದಿಲ್ಲ ಅಂತ ಅಪೋಲೋ ಪಾರ್ಮಸಿ ಯವರಿಗೆ ಪೋನ್ ಮಾಡಲು ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ತೊಂದರೆ ಇತ್ತು ಎಂದು ನುಡಿದಿರುತ್ತಾರೆ. ಅಪೋಲೋ ಪಾರ್ಮಸಿಯವರಿಗೆ ಪೋನ್ ಮಾಡಿ ತಿಳಿದುಕೊಳ್ಳಲು ಏನು ತೊಂದರೆ ಇತ್ತು ಎಂದು ಗೊತ್ತಿಲ್ಲ. ನನ್ನ ಸೊಸೆ ನನ್ನ ಮಗನಿಗೆ ಎಲ್ಲಿ ಇದ್ದೀಯಾ ಅಂತ ಆ ದಿನ ಪೋನ್ ಮಾಡಿದ್ದರು ಎಂದರೆ ಸರಿಯಲ್ಲ. ಸಂಜೆ *7.00* ಗಂಟೆಗೆ ನನ್ನ ಸೊಸೆ ನನ್ನ ಮಗನ ಜೊತೆಗೆ ಮಾತನಾಡಿದ್ದು ಅದು ರೆಕಾರ್ಡ್ ಆಗಿದೆ ಎಂದರೆ ಸಾಕ್ಷಿದಾರರು ನನ್ನ ಸೊಸೆ ಮಾತನಾಡಿಲ್ಲ ಎಂದು ನುಡಿದಿರುತ್ತಾರೆ.

ದಿ:16.06.2024 ರಂದು ಪೊಲೀಸರು ನಮ್ಮ ಮನೆಗೆ ಬಂದಿದ್ದರು. ಆ ಸಮಯದಲ್ಲಿ ದಿ:08.06.2024 ರಂದು ನನ್ನ ಸೊಸೆ ಮೊಬೈಲ್‌ಗೆ ಎಷ್ಟು ಕರೆಗಳು ಬಂದಿದ್ದವು ಅಂತ ಅವರ ಮೊಬೈಲನ್ನು ಪೊಲೀಸರು ಪರಿಶೀಲನೆ ಮಾಡಿದ್ದರು ಎಂದರೆ ಸರಿಯಲ್ಲ. ಅದೇ ರೀತಿಯಾಗಿ ನನ್ನ ಗಂಡನ ಮೊಬೈಲನ್ನೂ ಸಹ ಪರಿಶೀಲನೆ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ, ನನ್ನ ಗಂಡನ ಮತ್ತು ನನ್ನ ಸೊಸೆಯ ಮೊಬೈಲ್ ಗಳನ್ನು ಪೊಲೀಸರು ಪರಿಶೀಲಿಸಿ ಸಂಜೆ 5.00 ಗಂಟೆಯಿಂದ 7.00 ಗಂಟೆಯವರೆಗೆ ಕರೆಗಳನ್ನು ಪರಿಶೀಲಿಸಿ ಅವುಗಳ ಕುರಿತು ತಮಗೆ ಅವಶ್ಯಕತೆ ಇಲ್ಲ ಅಂತ ಹೇಳಿ ಆ ಮೊಬೈಲ್‌ಗಳನ್ನು ನಮಗೆ ವಾಪಸ್ಸು ಕೊಟ್ಟರು ಎಂದರೆ ಸಾಕ್ಷಿದಾರರು ನಮ್ಮ ಮೊಬೈಲ್ ಗಳನ್ನು ಪರಿಶೀಲನೆ ಮಾಡಿಲ್ಲ ಎಂದು ನುಡಿದಿರುತ್ತಾರೆ. ನನ್ನ ಮಗನ ಮೊಬೈಲ್ ಹ್ಯಾಂಡ್ ಸೆಟ್ ಯಾವ ಕಂಪನಿಯದ್ದು ಎಂದು ನನಗೆ ಗೊತ್ತಿಲ್ಲ.

ದಿ:11.06.2024 ರಂದು ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಗೆ ಹೋದಾಗ ನನ್ನ ಹಾಗೂ ನನ್ನ ಗಂಡನ ಬಳಿ ಮೊಬೈಲ್‌ಗಳು ಇದ್ದವು. ಆ ದಿನ ನನ್ನ ಮತ್ತು ನನ್ನ ಗಂಡನ ಮೊಬೈಲ್ ಗಳನ್ನು ಕಾಮಾಕ್ಷಿ ಪಾಳ್ಯ ಪೊಲೀಸರು ಪರಿಶೀಲಿಸಿದ್ದರು ಎಂದರೆ ಸರಿಯಲ್ಲ. ದಿ:08.06.2024 ರಿಂದ ನನ್ನ ಮಗನ ಮೊಬೈಲ್ ಹ್ಯಾಂಡ್ ಸೆಟ್ಟನ್ನು ನೋಡಿಲ್ಲ. ದಿ:11.06.2024 ರಂದು ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಮಗನ ಮೊಬೈಲ್ ಇತ್ತಾ ಇಲ್ಲವಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನೋಡಿಲ್ಲ ಎಂದು ನುಡಿದಿರುತ್ತಾರೆ. ಆ ದಿನ ನನಗೆ ಪೊಲೀಸರು ದಿ:08.06.2024 ರಂದು ಸಂಜೆ 5.00 ಗಂಟೆಗೆ ನನ್ನ ಮಗ ಚಿತ್ರದುರ್ಗದಲ್ಲಿ ಇದ್ದ ಅಂತ ನನಗೆ ಹೇಳಿದ್ದರು ಎಂದರೆ ಸರಿಯಲ್ಲ.

ನನ್ನ ಮಗ ಚಿತ್ರದುರ್ಗದಲ್ಲಿರುವ ಬಾಲಾಜಿ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಆಗಾಗ ಹೋಗಿ ಬರುತ್ತಿದ್ದ ಎಂಬ ಪ್ರಶ್ನೆಗೆ ಸಾಕ್ಷಿದಾರರು ಯಾವಾಗಲೂ ಆತ ಅಲ್ಲಿಗೆ ಹೋಗಿಲ್ಲ ಎಂದು ನುಡಿದಿರುತ್ತಾರೆ. ನನ್ನ ಮಗ ಆ ದಿನ ಬೆಳಗ್ಗೆ ಮನೆಯಲ್ಲಿ ತಿಂಡಿ ತಿಂದು ಹೋಗಿದ್ದ. ಆತ ಮಧ್ಯಾಹ್ನ ಊಟಕ್ಕೆ ಹೊರಗೆ ಹೋಗಿದ್ದ ಎಂಬ ಪ್ರಶ್ನೆಗೆ ಸಾಕ್ಷಿದಾರರು ಹೊರಗಡೆ ಹೋಗಿ ಬರುತ್ತೇನೆ ಎಂದು ಹೇಳಿದ್ದ ಎಂದು ನುಡಿದಿರುತ್ತಾರೆ. ಹೊರಗಡೆ ಊಟಕ್ಕೆ ಎಂದರೆ ಸರಿ. ನನ್ನ ಮಗ *4* ಜನ ಸ್ನೇಹಿತರ ಜೊತೆಗೆ ಒಟ್ಟಿಗೆ ಹೋದ ಎಂದರೆ ಸಾಕ್ಷಿದಾರರು ಆತ *4* ಜನ ಸ್ನೇಹಿತರ ಜೊತೆಗೆ ಹೊರಗಡೆ ಊಟಕ್ಕೆ ಹೋಗಿ ಬರುತ್ತೇನೆ ಎಂದು ಹೇಳಿದ್ದ ಎಂದು ನುಡಿದಿರುತ್ತಾರೆ.

ನನ್ನ ಮಗನ ಸ್ನೇಹಿತರು ನನಗೆ ಗೊತ್ತು ಎಂದರೆ ಸಾಕ್ಷಿದಾರರು ಕೆಲವರು ಗೊತ್ತು, ಕೆಲವರು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಮನೆಯ ಅಕ್ಕಪಕ್ಕದ ಸ್ನೇಹಿತರ ಜೊತೆಗೆ ಊಟಕ್ಕೆ ಹೋಗಿ ಬರುತ್ತೇನೆ ಅಂತ ನನ್ನ ಮಗ ಹೇಳಿದ್ದ ಎಂದರೆ ಸರಿಯಲ್ಲ. ಆ ದಿನ ಸಂಜೆ *6.00* ಗಂಟೆಯಿಂದ ರಾತ್ರಿ *10.00* ಗಂಟೆಯವರೆಗೆ ನನ್ನ ಮಗನ ಸ್ನೇಹಿತರ ಜೊತೆ ವಿಚಾರಿಸುವುದು ಅವಶ್ಯಕತೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ಮಗ ಇಲ್ಲದೇ ಇರುವುದರಿಂದ ವಿಚಾರಣೆ ಮಾಡುವ ಅವಶ್ಯಕತೆ ಇತ್ತು ಎಂದು ನುಡಿದಿರುತ್ತಾರೆ.

ದಿಃ*08.06.2024* ರಂದು ಮಧ್ಯಾಹ್ನ *2.00* ಗಂಟೆಗೆ ನನ್ನ ಮಗ ಸ್ನೇಹಿತರ ಜೊತೆಗೆ ಬಾಲಾಜಿ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಊಟ ಮಾಡಿದ್ದ ಅಂತ ಪೊಲೀಸರು ನನಗೆ ಪೋಟೋ ತೋರಿಸಿದ್ದರು ಎಂದರೆ ಸರಿಯಲ್ಲ. ಮು.ಮಾ *1* ನ್ನು ನನ್ನ ಮಗ ಖರೀದಿಸಿರುತ್ತಾನೆ, ಯಾರು ಗಿಫ್ಟ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ಮಗ ಸಂಜೆ ಮನೆಗೆ ಬಂದು ಮು.ಮಾ *1* ನ್ನು ಧರಿಸಿಕೊಂಡು ಹೊರಗಡೆ ಹೋದ ಎಂದರೆ ಸರಿಯಲ್ಲ. ಶವಾಗಾರದಲ್ಲಿ ನಿಪಿ.*2*

ಮತ್ತು ನಿಪಿ.*3* ರಲ್ಲಿ ಕಂಡಂತೆ ಮು.ಮಾ *1* ನ್ನು ನನ್ನ ಮಗ ಧರಿಸಿ, ಮನೆಯಿಂದ ಹೋಗಿದ್ದ ಅಂತ ಪೊಲೀಸರ ಮುಂದೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ *1* ರ ಕುರಿತು ಪೊಲೀಸರ ಮುಂದೆ ಏನು ಹೇಳಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ಮಗ ಮನೆಯಿಂದ ಹೋಗುವಾಗ ಬೇರೆ ಶರ್ಟ್ ಹಾಕಿಕೊಂಡಿದ್ದ ಎಂದು ನುಡಿದಿರುತ್ತಾರೆ.

ದಿಃ*11.06.2024* ರಂದು ಮು.ಮಾ *1* ರ ಕುರಿತು ಪೊಲೀಸರು ನನ್ನನ್ನು ವಿಚಾರಿಸಿಲ್ಲ. ದಿಃ*14.06.2024* ರಂದು ಮು.ಮಾ *1* ರ ಕುರಿತು ಪೊಲೀಸರ ಮುಂದೆ ಹೇಳಿಲ್ಲ. ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ಕೈ ಗಡಿಯಾರದ ಕುರಿತು ಪೊಲೀಸರ ಮುಂದೆ ಹೇಳಿದ್ದೇನೆ. ಅವುಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿದಾರರು ನೋಡಲು ಅವುಗಳು ಇರಲಿಲ್ಲ ಎಂದು ನುಡಿದಿರುತ್ತಾರೆ. ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ಕೈಗಡಿಯಾರದ ಕುರಿತು ಪೊಲೀಸರು ಹೇಳಿದ ನಂತರ ಗೊತ್ತಾಯಿತು ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾನು ನನ್ನ ಮಗ ಮನೆಯಿಂದ ಹೊರಡುವಾಗ ಅದನ್ನು ಧರಿಸಿದ್ದನ್ನು ನೋಡಿರುತ್ತೇನೆ ಎಂದು ನುಡಿದಿರುತ್ತಾರೆ. ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ಕೈಗಡಿಯಾರ ಇವತ್ತಿಗೂ ನನ್ನ ಮನೆಯಲ್ಲಿ ಇದೆ ಎಂದರೆ ಸರಿಯಲ್ಲ.

ದಿಃ*08.06.2024* ರ ನಂತರ ಮು.ಮಾ *8* ನ್ನು ನಾನು ನೋಡಿರುವುದಿಲ್ಲ. ದಿಃ*16.06.2024* ರಂದು ಪೊಲೀಸರು ನಮ್ಮ ಮನೆಗೆ ಬಂದಾಗ ತಮ್ಮ ಬಳಿಯಲ್ಲಿದ್ದ ಮು.ಮಾ *8* ನ್ನು ನನಗೆ ತೋರಿಸಿದ್ದರು ಎಂದರೆ ಸರಿಯಲ್ಲ. ಮು.ಮಾ *8* ಇದು ಪಿಂಕ್ ಕಲರ್ ಅಲ್ಲ ಎಂದರೆ ಸಾಕ್ಷಿದಾರರು ಅದು ಕ್ರೀಂ ಕಲರ್ ಇದ್ದು, ನಾನು ಅದೇ ರೀತಿಯಾಗಿ ಹೇಳಿರುತ್ತೇನೆ ಎಂದು ನುಡಿದಿರುತ್ತಾರೆ. ದಿಃ*11.06.2024* ರಂದು ಮತ್ತು ದಿಃ*14.06.2024* ರಂದು ಮು.ಮಾ *8* ಕ್ರೀಂ

ಕಲರ್ ಅಂತ ಹೇಳಿಲ್ಲ, ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ *8* ನ್ನು ದಿಃ*16.06.2024* ರಂದು ಪೊಲೀಸರು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ.

ದಿಃ*08.06.2024* ರಂದು ನನ್ನ ಮಗ ಕಾಣೆಯಾಗಿಲ್ಲ, ಆ ಕಾರಣಕ್ಕಾಗಿ ದೂರು ಕೊಟ್ಟಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಕಾಣೆಯಾಗಿದ್ದ ಎಂದು ನುಡಿದಿರುತ್ತಾರೆ. ದಿಃ*08.06.2024* ರಂದು ನನ್ನ ಮಗ ಕಾಣೆಯಾಗಿದ್ದ ಅಂತ ದೂರು ಕೊಡಲು ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಿಃ*08.06.2024* ರಂದು ನನ್ನ ಮಗ ಅಪೋಲೋ ಪಾರ್ಮಸಿಗೆ ಕೆಲಸಕ್ಕೆ ಹೋಗಿ ಹಾಜರಾತಿ ಹಾಕಿದ ಎನ್ನುವ ವಿಚಾರ ನಮಗೆ ಅದೇ ದಿನ ಗೊತ್ತಾಯಿತು ಎಂದರೆ ಸರಿಯಲ್ಲ. ನನಗೆ ಪೋನ್ ಮಾಡಿದಾಗ ನನ್ನ ಮಗ ಅಪೋಲೋ ಪಾರ್ಮಸಿಯಲ್ಲಿ ಕೆಲಸದಲ್ಲಿ ಇದ್ದ ಎಂದರೆ ಸರಿಯಲ್ಲ. ನನ್ನ ಮಗ ಪೋನ್ ಮಾಡಿದಾಗ ಅಲ್ಲಿಯವರೆಗೆ ಆತ ಎಲ್ಲಿದ್ದ ಎಂದು ನನಗೆ ಗೊತ್ತಿಲ್ಲ. ದಿಃ*08.06.2024* ರಂದು ನನ್ನ ಮಗ ಎಲ್ಲಿ ಹೋಗಿದ್ದಾನೆ ಅಂತ ಆತನ ಸ್ನೇಹಿತರನ್ನು ವಿಚಾರಿಸಿದ್ದೇನೆ. ಹೀಗೆ ವಿಚಾರಿಸಿದಾಗ ಸಮಯ *8.00* ಗಂಟೆಯಾಗಿತ್ತು. ನನ್ನ ಮಗನ ಸ್ನೇಹಿತರು ಆತನ ಜೊತೆಗೆ ಊಟ ಮಾಡಿದ್ದೆವು ಅಂತ ನನಗೆ ಹೇಳಿದ್ದರು ಎಂದರೆ ಸರಿಯಲ್ಲ.

ದಿಃ*09.06.2024* ರಂದು ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ನಾವು ಮನೆಯಲ್ಲೇ ಇದ್ದೆವು. ದಿಃ*09.06.2024* ರಂದು ನನ್ನ ಮಗನನ್ನು ಕುರಿತು ಅಪೋಲೋ ಪಾರ್ಮಸಿಯವರನ್ನು ವಿಚಾರಿಸಿದ್ದೆವು. ಅಪೋಲೋ ಪಾರ್ಮಸಿಯವರು ನನ್ನ ಮಗ ಬೆಳಗ್ಗೆ ಕೆಲಸಕ್ಕೆ ಬಂದು ಮಧ್ಯಾಹ್ನದವರೆಗೆ ಕೆಲಸ ಮಾಡಿರುತ್ತಾನೆ ಅಂತ ನನಗೆ ತಿಳಿಸಿದರು ಎಂದರೆ ಸರಿಯಲ್ಲ.

ದಿ:*09.06.2024* ರಂದು ನನ್ನ ಮಗ ಕೆ.ಎಸ್.ಆರ್.ಟಿ.ಸಿ ಬಸ್ ಹತ್ತಿ ಹೊರಗಡೆ ಹೋದ ವಿಚಾರ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ದಿ:*09.06.2024* ರಂದು ನನ್ನ ಮಗ ಎಲ್ಲಿಗೆ ಹೋದ ಅಂತ ಗೊತ್ತಾ ಎಂದರೆ ಸಾಕ್ಷಿದಾರರು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಿ:*09.06.2024* ರಂದು ನನ್ನ ಮಗ ಕಾಣೆಯಾಗಿದ್ದಾನೆ ಅಂತ ದೂರು ಕೊಡಲು ಅವಶ್ಯಕತೆ ಇತ್ತಾ ಇಲ್ಲವಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನನ್ನ ಮಗ ಮಾಮೂಲಿಯಂತೆ ಹೊರಗಡೆ ಹೋಗಿರುವುದರಿಂದ ಆತ ಕಾಣೆಯಾಗಿದ್ದಾನೆ ಅಂತ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಿ:*09.06.2024* ರಂದು ನನ್ನ ಮಗ ಎಲ್ಲಿಗೆ ಹೋಗಿದ್ದ ಎನ್ನುವುದು ಆತನ ಸ್ನೇಹಿತರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ಮಗ ಎಲ್ಲಿಗೆ ಹೋಗಿದ್ದಾನೆ ಎಂಬುದು ನನಗೆ ಮತ್ತು ನನ್ನ ಗಂಡನಿಗೆ ಗೊತ್ತಿದ್ದರಿಂದ ದಿ:*10.06.2024* ರಂದು ನಾವು ದೂರು ಕೊಟ್ಟಿಲ್ಲ ಎಂದರೆ ಸಾಕ್ಷಿದಾರರು ನನ್ನ ಮಗ ಎಲ್ಲಿಗೆ ಹೋಗಿದ್ದ ಎನ್ನುವುದು ನಮಗೆ ಗೊತ್ತಿರಲಿಲ್ಲ ಎಂದು ನುಡಿದಿರುತ್ತಾರೆ.

ದಿ:*11.06.2024* ರಂದು ನಾವು ಪೊಲೀಸ್ ಠಾಣೆಗೆ ಹೋದಾಗ ನನ್ನ ಮಗ ದಿ:*08.06.2024* ರಂದು ಸಂಜೆ *8.00* ಗಂಟೆಗೆ ಬೆಂಗಳೂರಿಗೆ ಬಂದಿದ್ದ ಎಂಬ ವಿಚಾರವನ್ನು ನಮಗೆ ಹೇಳಿದ್ದರು ಎಂದರೆ ಸರಿಯಲ್ಲ. ಶನಿವಾರ ಮತ್ತು ಭಾನುವಾರ ನನ್ನ ಮಗ ಅಪೋಲೋ ಫಾರ್ಮಸಿಯವರು ಕೊಟ್ಟ ಸಮವಸ್ತ್ರ ಧರಿಸುತ್ತಿರಲಿಲ್ಲ. ಶನಿವಾರದಂದು ನನ್ನ ಮಗ ಸಮವಸ್ತ್ರ ಧರಿಸಿರಲಿಲ್ಲ ಎಂದು ಪೊಲೀಸರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ:*08.06.2024* ರಿಂದ ದಿ:*13.06.2024* ರವೆಗೆ ಮು.ಮಾ *4* ಮತ್ತು ಮು.ಮಾ *5* ರ ಕುರಿತು ಯಾರ ಮುಂದೆಯೂ ಹೇಳಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನಗೆ

ಗೊತ್ತಾಗುವುದಿಲ್ಲ ಎಂದು ನುಡಿದಿರುತ್ತಾರೆ. ಪೊಲೀಸರ ಮಾತು ಕೇಳಿ ಮು.ಮಾ *4* ಮತ್ತು *5* ರ ಕುರಿತು ಈ ದಿನ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ *4* ಮತ್ತು *5* ರ ಕುರಿತು ದಿಃ*08.06.2024* ರಿಂದ ದಿಃ*13.06.2024* ರವರೆಗೆ ಏಕೆ ಹೇಳಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಮು.ಮಾ *6* ಮತ್ತು *7* ಗಳು ಖರೀದಿ ಮಾಡಿದ ಬಿಲ್‌ಗಳಲ್ಲ, ಆರ್ಡರ್ ಮಾಡಿದ ಬಿಲ್‌ಗಳು ಎಂದರೆ ಸರಿಯಲ್ಲ. ಮು.ಮಾ *6* ಮತ್ತು *7* ನ್ನು ಪೊಲೀಸರು ತಂದು ಕೊಟ್ಟಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾವೇ ಅವರಿಗೆ ಕೊಟ್ಟಿರುತ್ತೇವೆ ಎಂದು ನುಡಿದಿರುತ್ತಾರೆ. ದಿಃ*11.06.2024* ರಂದು ಮು.ಮಾ *4* ಮತ್ತು *5* ನ್ನು ನನ್ನ ಮಗ ಧರಿಸಿದ್ದ ಅಂತ ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಮು.ಮಾ *4* ಮತ್ತು ಮು.ಮಾ *5* ನನ್ನ ಮಗನಿಗೆ ಸಂಬಂಧಪಡದೇ ಇರುವುದರಿಂದ ಅವುಗಳನ್ನು ಕುರಿತು ದಿಃ*08.06.2024* ರಿಂದ ದಿಃ*13.06.2024* ವರೆಗೆ ಹೇಳಿಲ್ಲ ಎಂದರೆ ಸರಿಯಲ್ಲ. ರಾಜಕೀಯ ಪಿತೂರಿಯಿಂದ ನಾನು ಈ ದಿನ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈಗ ಸಂಜೆ *4.55* ಗಂಟೆಯಾಗಿರುವುದರಿಂದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇ.

(ಐ.ಪಿ.ನಾಯಿಕ)
56 ನೇ ಅಪರ ಸಿಟಿ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು.